## ಕರ್ನಾಟಕ ಸರ್ಕಾರ

**ಸಂ**: ಹಿಂವಕ 107 ಬಿಇಟಿ 2021

ಕರ್ನಾಟಕ ಸರ್ಕಾರ ಸಚಿವಾಲಯ
ವಿಕಾಸಸೌಧ
ಬೆಂಗಳೂರು, ದಿ:05.02.2022

### "ಸುತ್ತೋಲೆ

**ವಿಷಯ:** ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಲ್ಲಿನ ಗ್ರೂಪ್-ಡಿ ವೃಂದದ ನೌಕರರನ್ನು ಒಂದು ಜಿಲ್ಲೆಯೊಳಗೆ ಆಯಾ ಜಿಲ್ಲಾ ಮಟ್ಟದಲ್ಲಿಯೇ ಸಾಮಾನ್ಯ ವರ್ಗಾವಣೆಯ ಸಮಯದಲ್ಲಿ ಪಾರದರ್ಶಕ ಕೌನ್ಸಿಲಿಂಗ್ ಮೂಲಕ ವರ್ಗಾವಣೆ ಮಾಡುವ ಬಗ್ಗೆ ಹಾಗೂ ಕೆಲವು ವಿಶೇಷ ಪ್ರಕರಣಗಳಲ್ಲಿ ಒಂದು ಜಿಲ್ಲೆಯಿಂದ ಮತ್ತೊಂದು ಜಿಲ್ಲೆಗೆ ನಿಯೋಜನೆ ಮೇರೆಗೆ ಸ್ಥಳ ನಿಯುಕ್ತಿಗೊಳಿಸುವ ಕುರಿತು.

**ಉಲ್ಲೇಖ:** ಸರ್ಕಾರದ ಅಧಿಸೂಚನೆ ಸಂಖ್ಯೆ:ಸಿಆಸುಇ 179 ಸೇನೆನಿ 2020, ದಿನಾಂಕ:06.07.2021.

*****

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವಿದ್ಯಾರ್ಥಿನಿಲಯಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಗ್ರೂಪ್-ಡಿ ವೃಂದಕ್ಕೆ ಸೇರಿದ ಅಡುಗೆಯವರು, ಅಡುಗೆ ಸಹಾಯಕರು ಹಾಗೂ ರಾತ್ರಿ ಕಾವಲುಗಾರರನ್ನು ಒಂದು ಜಿಲ್ಲೆಗೆ ಸೀಮಿತವಾದಂತೆ ಜಿಲ್ಲಾ ಮಟ್ಟದಲ್ಲಿ ಮಾತ್ರ ಆಯಾ ನೇಮಕಾತಿ ಪ್ರಾಧಿಕಾರಗಳಿಂದ ನೇಮಕಾತಿ ಮಾಡಲಾಗುತ್ತಿದೆ.

ಕರ್ನಾಟಕ ನಾಗರೀಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು, 1977ರಲ್ಲಿನ ನಿಯಮ 16(ಎ)(ii)ರಲ್ಲಿ ಒಂದು ಇಲಾಖೆಯ ಅಧಿಕಾರಿ/ನೌಕರರನ್ನು ಬೇರೊಂದು ಇಲಾಖೆಯ ತತ್ಸಮಾನ ವೇತನ ಶ್ರೇಣಿಯ ಹುದ್ದೆಗೆ ವರ್ಗಾವಣೆ ಮೂಲಕ ವಿಲೀನಗೊಳಿಸಲು ಅವಕಾಶ ಕಲ್ಪಿಸಲಾಗಿತ್ತು. ಆದರೆ, ಉಲ್ಲೇಖಿತ ಸರ್ಕಾರದ ಅಧಿಸೂಚನೆಯಲ್ಲಿ ಕರ್ನಾಟಕ ನಾಗರೀಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು *1977ರ ನಿಯಮ 16ಕ್ಕೆ ತಿದ್ದುಪಡಿ ಮಾಡಿ ನಿಯಮ 16-ಎ (II) ರಲ್ಲಿ ವರ್ಗಾವಣೆ "ಮಾಡುವ ಮೂಲಕ ಅಥವಾ" ಎಂಬ ಪದಗಳನ್ನು ತೆಗೆದುಹಾಕಲಾಗಿರುತ್ತದೆ.* ಇದರಿಂದಾಗಿ, ಎಲ್ಲಾ ರೀತಿಯ ಘಟಕೀಯ ವರ್ಗಾವಣೆಯನ್ನು ನಿರ್ಬಂಧಿಸಲಾಗಿರುತ್ತದೆ. ಆದುದರಿಂದ ಈಗ ಒಂದು ಜಿಲ್ಲೆಯಲ್ಲಿ ನೇಮಕ ಹೊಂದಿದ ಅಡುಗೆಯವರು, ಅಡುಗೆ ಸಹಾಯಕರು ಹಾಗೂ ರಾತ್ರಿ ಕಾವಲುಗಾರರನ್ನು ಬೇರೊಂದು ಜಿಲ್ಲೆಗೆ ವರ್ಗಾವಣೆ ಮಾಡಲು ನಿಯಮಗಳಲ್ಲಿ ಅವಕಾಶವಿರುವುದಿಲ್ಲ.

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಲ್ಲಿ ಸಂಖ್ಯಾಬಲದ ಆಧಾರದ ಮೇಲೆ ಗ್ರೂಪ್-ಡಿ ಅತಿದೊಡ್ಡ ವೃಂದವಾಗಿರುತ್ತದೆ. ಸದರಿ ವೃಂದದ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ನೌಕರರ ಹಿತಕ್ಕಾಗಿ ಹಾಗೂ ಪಾರದರ್ಶಕ ವೃಂದ ನಿರ್ವಹಣೆಗಾಗಿ ವಿದ್ಯಾರ್ಥಿನಿಲಯಗಳ ಗ್ರೂಪ್-ಡಿ ನೌಕರರಾದ ಅಡುಗೆಯವರು, ಅಡುಗೆ ಸಹಾಯಕರು ಹಾಗೂ ರಾತ್ರಿ ಕಾವಲುಗಾರರ ವರ್ಗಾವಣೆಯನ್ನು ಖಾಲಿ ಹುದ್ದೆಗಳ ವಿವರ ಹಾಗೂ ಜೇಷ್ಠತೆಯನ್ನು ಅನುಸರಿಸಿ ಪಾದರ್ಶಕ ಕೌನ್ಸಿಲಿಂಗ್ ಪದ್ಧತಿಯ ಮುಖಾಂತರ ಇನ್ನು ಮುಂದೆ ಪ್ರತಿ ವರ್ಷ ಸಾಮಾನ್ಯ ವರ್ಗಾವಣೆ ಸಮಯದಲ್ಲಿ ಸಂಬಂಧಿಸಿದ ಜಿಲ್ಲೆಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್‌ರವರ ಹಂತದಲ್ಲಿಯೇ ಮಾಡಲು ಪ್ರತ್ಯೇಕ ಮಾರ್ಗಸೂಚಿಗಳನ್ನು ಹೊರಡಿಸಲಾಗುವುದು.

ಮುಂದುವರೆದು, ಅಡುಗೆಯವರು, ಅಡುಗೆ ಸಹಾಯಕರು ಮತ್ತು ರಾತ್ರಿ ಕಾವಲುಗಾರರನ್ನು ವರ್ಗಾವಣೆ ಮಾಡುವಂತೆ ಕೋರಿ ಮನವಿಗಳು ಬರುತ್ತಿವೆ. ಆದರೆ, ಉಲ್ಲೇಖಿತ ಅಧಿಸೂಚನೆಯನ್ವಯ ನೌಕರರ ಅಂತರ್ ಜಿಲ್ಲಾ ವರ್ಗಾವಣೆಗಳನ್ನು ಸಂಪೂರ್ಣವಾಗಿ ನಿರ್ಬಂಧಿಸಬೇಕಾಗಿರುತ್ತದೆ.

-2-

V. Akkamahadevi

ಆದಕಾರಣ ಈ ಕೆಳಕಂಡ **ವಿಶೇಷ ಪ್ರಕರಣಗಳಲ್ಲಿ** ಮಾತ್ರ ವಿವರಿಸಿರುವ ಷರತ್ತುಗಳಿಗೊಳಪಟ್ಟು ಅರ್ಹ ನೌಕರರ ಕೋರಿಕೆ ಮೇಲೆ ಇತಂಹ ಅರ್ಹ ನೌಕರರ ಸೇವಾವಧಿಯಲ್ಲಿ ಒಂದು ಬಾರಿಗೆ ಮಾತ್ರ ಸೀಮಿತಗೊಳಿಸಿ ಗರಿಷ್ಠ 03 ವರ್ಷದ ಅವಧಿಗೆ ಮಾತ್ರ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಹಂತದಲ್ಲಿ ನಿಯೋಜನೆ ಮಾಡಲು ಅವಕಾಶ ಮಾಡಿಕೊಡಲಾಗಿದೆ.

**ವಿಶೇಷ ಪ್ರಕರಣಡಿಯಲ್ಲಿ ಈ ಕೆಳಕಂಡ ನೌಕರರನ್ನು ಮಾತ್ರ ಕೆಳಕಂಡ ಆದ್ಯತೆಯನುಸಾರ ಪರಿಗಣಿಸಲು ಅವಕಾಶವಿರುತ್ತದೆ.**

1. **ಅಪ್ರಾಪ್ತ ಮಕ್ಕಳನ್ನು ಹೊಂದಿರುವ ವಿಧವೆಯರಾಗಿದ್ದಲ್ಲಿ:-** ವಿದ್ಯಾರ್ಥಿನಿಲಯಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಡುಗೆಯವರು, ಅಡುಗೆ ಸಹಾಯಕರು ಹಾಗೂ ರಾತ್ರಿ ಕಾವಲುಗಾರರ ವೃಂದದದವರು ಅಪ್ರಾಪ್ತ ಮಕ್ಕಳನ್ನು ಹೊಂದಿರುವ ವಿಧವೆಯರಾಗಿದ್ದಲ್ಲಿ.
2. **ಈ ವೃಂದಗಳ ಮಹಿಳಾ ಸಿಬ್ಬಂದಿಯ ಅಪ್ರಾಪ್ತ ಮಕ್ಕಳ ದೀರ್ಘಾವಧಿ ಚಿಕಿತ್ಸೆಗಾಗಿ:-** ವಿದ್ಯಾರ್ಥಿನಿಲಯಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಮಹಿಳಾ ಅಡುಗೆಯವರು, ಮಹಿಳಾ ಅಡುಗೆ ಸಹಾಯಕರು ಹಾಗೂ ಮಹಿಳಾ ರಾತ್ರಿ ಕಾವಲುಗಾರರು ಅಪ್ರಾಪ್ತ ಮಕ್ಕಳನ್ನು ಹೊಂದಿದ್ದು ತಮ್ಮ ಅಪ್ರಾಪ್ತ ಮಕ್ಕಳ ದೀರ್ಘಾವಧಿ ಚಿಕಿತ್ಸೆಗಾಗಿ ಸತತವಾಗಿ ಆಸ್ಪತ್ರೆಗೆ ದಾಖಲಿಸುವ ಅನಿವಾರ್ಯತೆ ಇದ್ದಲ್ಲಿ.
3. **ದೃಷ್ಠಿಮಾಂದ್ಯತೆ:-** ವಿದ್ಯಾರ್ಥಿನಿಲಯಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಡುಗೆಯವರು, ಅಡುಗೆ ಸಹಾಯಕರು ಹಾಗೂ ರಾತ್ರಿ ಕಾವಲುಗಾರರ ವೃಂದದದವರು ದೃಷ್ಠಿಮಾಂದ್ಯರಾಗಿದ್ದಲ್ಲಿ.

ಷರತ್ತುಗಳು:-

1. ಬೇರೆ ಜಿಲ್ಲೆಗೆ ನಿಯೋಜನೆ ಬಯಸುವ ಅರ್ಹ ನೌಕರರು ಸಕಾರಣಗಳೊಂದಿಗೆ ಹಾಗೂ ನಿಯಮಾನುಸಾರ ಅಗತ್ಯ ದಾಖಲೆಗಳೊಂದಿಗೆ ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳಿಗೆ ಅರ್ಜಿ ಸಲ್ಲಿಸುವುದು.
2. ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ಪ್ರಸ್ತಾವನೆಯನ್ನು ನಿಯಮಾನುಸಾರ ಪರಿಶೀಲಿಸಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್ ರವರಿಗೆ ಕಡತ ಮಂಡಿಸುವುದು.
3. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್ ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ ಅರ್ಹರಿದ್ದಲ್ಲಿ ನಿಯೋಜನೆ ಕೋರಿರುವ ಜಿಲ್ಲೆಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಂದ ಹುದ್ದೆ ಖಾಲಿ ಇರುವ ಬಗ್ಗೆ ವರದಿ ಹಾಗೂ ನಿರಾಕ್ಷೇಪಣಾ ಪತ್ರವನ್ನು ಪಡೆಯತಕ್ಕದ್ದು.
4. ನಿಯೋಜನೆಯನ್ನು ನೌಕರರ ಒಟ್ಟಾರೆ ಸೇವಾವಧಿಯಲ್ಲಿ ಒಂದು ಬಾರಿಗೆ ಮಾತ್ರ ಮಾಡಲು ಅವಕಾಶ ಕಲ್ಪಿಸಲಾಗಿದೆ.
5. ನಿಯೋಜನಾ ಅವಧಿಯನ್ನು ಗರಿಷ್ಠ 03 ವರ್ಷಕ್ಕೆ ಸೀಮಿತಗೊಳಿಸತಕ್ಕದ್ದು. ನಿಯೋಜನಾ ಅವಧಿಯು ಮುಗಿದ ಕೂಡಲೆ ಜಿಲ್ಲೆಯಲ್ಲಿ ಸದರಿ ನೌಕರರು ಮೂಲ ಹುದ್ದೆಗೆ ಕರ್ತವ್ಯಕ್ಕೆ ಹಾಜರಾಗಬೇಕು.
6. ಒಂದು ಶೈಕ್ಷಣಿಕ ಸಾಲಿನಲ್ಲಿ ಒಂದು ಜಿಲ್ಲೆಯಿಂದ ಇಂತಹ **03 ವಿಶೇಷ ಪ್ರಕರಣಗಳ** ನಿಯೋಜನೆಗೆ ಮಾತ್ರ ಅವಕಾಶವಿರುತ್ತದೆ.
7. ವಿದ್ಯಾರ್ಥಿನಿಲಯಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಡುಗೆಯವರು, ಅಡುಗೆ ಸಹಾಯಕರು ಹಾಗೂ ರಾತ್ರಿ ಕಾವಲುಗಾರರನ್ನು ಅದೇ ಹುದ್ದೆಯ ಕರ್ತವ್ಯಕ್ಕೆ ಮಾತ್ರ ವಿದ್ಯಾರ್ಥಿನಿಲಯಕ್ಕೆ ನಿಯೋಜಿಸತಕ್ಕದ್ದು. ಇತರೆ ಇಲಾಖೆಯ ಸಮಾನಾಂತರ ಹುದ್ದೆಗಳಿಗೆ ನಿಯೋಜಿಸಲು ಅವಕಾಶವಿರುವುದಿಲ್ಲ.

V. Akkamahadevi 05/02/22

(ವಿ.ಅಕ್ಕಮಹಾದೇವಿ)
ಸರ್ಕಾರದ ಅಧೀನ ಕಾರ್ಯದರ್ಶಿ-1,
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ.

05/02/22

**ಇವರಿಗೆ:**

1. ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ವಸಂತನಗರ, ಬೆಂಗಳೂರು
2. ಎಲ್ಲಾ ಜಿಲ್ಲಾಧಿಕಾರಿಗಳು. (ಆಯುಕ್ತರ ಮುಖಾಂತರ)

3. ಎಲ್ಲಾ ಜಿಲ್ಲಾ ಪಂಚಾಯತ್, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು. (ಆಯುಕ್ತರ ಮುಖಾಂತರ)
4. ಎಲ್ಲಾ ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ. (ಆಯುಕ್ತರ ಮುಖಾಂತರ)

<u>ಪ್ರತಿ:</u>

1. ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಹಾಗೂ ಸಮಾಜ ಕಲ್ಯಾಣ ಇಲಾಖಾ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರ ಆಪ್ತ ಕಾರ್ಯದರ್ಶಿ, ವಿಕಾಸಸೌಧ.
3. ಸರ್ಕಾರದ ~~ಅಪರ~~ ಕಾರ್ಯದರ್ಶಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರ ಆಪ್ತ ಸಹಾಯಕರು, ವಿಕಾಸಸೌಧ.

*****